ಮಾತನ್ನು ಹೇಳಿದ್ದಾರೆ. ಈ 540 ಎಕರೆ ಈ ವರ್ಷ ಸುಮಾರು 12.25 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ನಮ್ಮ ಮಾದಾಪುರ ತೋಟಗಾರಿಕೆಯಲ್ಲಿ ಎಷ್ಟು ಎಕರೆ ತೋಟಗಾರಿಕೆ ರೂಪಿತವಾಗಿದೆ? ಎಷ್ಟು ಎಕರೆ ಕಾಡಾಗಿ ಉಳಿದಿದೆ? ಮಾದಾಪುರಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಾ ಎಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೆ, ತೋಟಗಾರಿಕೆ ಇಲಾಖೆಯ ಫಾರಂಗಳಿಗೆ ಪ್ರತಿ ವರ್ಷ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗುತ್ತದೆಂದು ಕೇಳಿದ್ದಾರೆ. ಅದಕ್ಕೆ ಉತ್ತರವನ್ನು ಒದಗಿಸಿದ್ದೇವೆ. ಅವರು ಫಾರಂವೈಸ್ ಮಾಹಿತಿ ಕೇಳಿದರೆ ಅದಕ್ಕೆ ಡಿಟೈಲ್ ಆಗಿ ಹೇಳಬೇಕಾಗುತ್ತದೆ. ಅದನ್ನು ತರಿಸಿ ನಿಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ನಾನು ಈ ಪ್ರಶ್ನೆಯನ್ನು ಏತಕ್ಕೆ ಕೇಳಿದೆನೆಂದರೆ, ಮಾದಾಪುರದಲ್ಲಿ ಈಗಾಗಲೇ ಇರುವಂತಹ ತೋಟಗಾರಿಕೆಯಲ್ಲಿ ಕೇವಲ 60 ಎಕರೆಯಲ್ಲಿ ಸಪೋಟ ಮಾಡಿದ್ದಾರೆ. ಅಲ್ಲಿ ಸಪೋಟವನ್ನು ಆಕ್ಷನ್ ಮಾಡಿದಾಗ ಆಕ್ಷನ್ ತೆಗೆದುಕೊಂಡಿರುವವರು ಗೊಬ್ಬರ ಹಾಕುವಂತಹ ಪರಿಸ್ಥಿತಿ ಬಂದಿದೆ. ಅವರು ನಮಗೆ ಹೆಚ್ಚು ಫಲವತ್ತತೆ ಬರಲಿ ಎಂದು ಗೊಬ್ಬರವನ್ನು ಹಾಕುತ್ತಾರೆ. ತೋಟಗಾರಿಕೆ ಇಲಾಖೆಯಿಂದ ಗೊಬ್ಬರವನ್ನು ಹಾಕುತ್ತಿಲ್ಲ. ಅದಕ್ಕೋಸ್ಕರ ಇದರ ಬಗ್ಗೆ ವಿವರವನ್ನು ಸರಿಯಾಗಿ ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಡಿ.ಟಿ. ಜಯಕುಮಾರ್ : ಆಕ್ಷನ್ ಆದ ಮೇಲೆ ಅದರ ಜವಾಬ್ದಾರಿ ನಮ್ಮ ಮೇಲೆ ಬೀಳುತ್ತದೆ. ಅದರ ಮೆಂಟನೆನ್ಸ್ ನೀರು, ಗೊಬ್ಬರ ಎಲ್ಲವನ್ನೂ ನೋಡಿಕೊಳ್ಳುವಂತೆ ಜವಾಬ್ದಾರಿ ನಮ್ಮ ಇಲಾಖೆಗೆ ಬೀಳುತ್ತದೆ. ನಾವು ಎಲ್ಲಾ ಕಡೆ ಒಂದೇ ತರಹ ಮಾಡುತ್ತಿದ್ದೇವೆ. ಮಾದಾಪುರ ಫಾರಂನಲ್ಲಿ ಏಕೆ ಮಾಡಲಿಲ್ಲ ಎಂಬ ಬಗ್ಗೆ ವಿಚಾರಿಸಿ, ಅಕಸ್ಮಾತ್ ಅವರು ಸರಿಯಾಗಿ ನೀರು, ಗೊಬ್ಬರ ಕೊಡದೇ ಇದ್ದರೆ ಸಾಕಾದಷ್ಟು ಹಣವನ್ನು ಒದಗಿಸಿ ಅದನ್ನು ಮಾಡಿಕೊಡುತ್ತೇವೆಂಬ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡಲಿಕ್ಕೆ ಬಯಸುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಹಾರಂಗಿ ಮತ್ತು ಮಡಿಕೇರಿ ಬಗ್ಗೆ ಡಿಟೈಲ್ಸ್ ಕೊಡಬೇಕೆಂದು ಕೇಳಿದ್ದೇನೆ.

ಶ್ರೀ ಡಿ.ಟಿ. ಜಯಕುಮಾರ್ : ಇದರ ಬಗ್ಗೆ ಡಿಟೈಲ್ ಆಗಿ ಉತ್ತರವನ್ನು ಕಳುಹಿಸಿಕೊಡುತ್ತೇನೆ.

ಬೈಲಹೊಂಗಲ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಕೆಲಸ ಮಾಡುವ ಹಮಾಲಿಗಳಿಗೆ ಮನೆಗಳು

359 - ಶ್ರೀ ಮಹಾಂತೇಶ್ ಎಸ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಕೆಲಸ ಮಾಡುತ್ತಿರುವ ಹಮಾಲರಿಗೆ ಮನೆಗಳನ್ನು ಕಟ್ಟಿಸಿಕೊಡುವ ಸಲುವಾಗಿ ಸರ್ಕಾರಕ್ಕೆ ಮನವಿ ಬಂದಿದೆಯೇ?

ಅ) ಹಾಗಿದ್ದಲ್ಲಿ ಅವರಿಗೆ ಮನೆಗಳನ್ನು ಕಟ್ಟಿಸಿಕೊಡಲು ಸರ್ಕಾರದದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಮಹಾಂತೇಶ್ ಎಸ್. ಕೌಜಲಗಿ : ಸನ್ಮಾನ್ಯ ಅಧ್ಯಕ್ಷರೆ, ಬೆಳಗಾವಿ ಜಿಲ್ಲೆ ಬೈಲಹೊಂಗಲ ಕೃಷಿ ಮಾರುಕಟ್ಟೆಯಲ್ಲಿ ಸಾಕಷ್ಟು ಸ್ಥಳಾವಕಾಶವಿದೆ. ಅಲ್ಲಿ ಹಣದ ಕೊರತೆಯೂ ಸಹ ಇಲ್ಲ. ಆದ್ದರಿಂದ ಅಲ್ಲಿ ಹಮಾಲರಿಗೆ ಬೇಕಾಗುವಂತಹ ಮನೆಗಳನ್ನು ಕಟ್ಟಿಕೊಟ್ಟರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಅದರ ಬಗ್ಗೆ ಕೂಡಲೇ ಕ್ರಮವನ್ನು ಕೈಗೊಳ್ಳಬೇಕೆಂದು ಕೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) (ಕೃಷಿ ಮಾರುಕಟ್ಟೆ ಸಚಿವರ ಪರವಾಗಿ) : ಸನ್ಮಾನ್ಯ ಅಧ್ಯಕ್ಷರೆ, ಬೆಳಗಾವಿ ಜಿಲ್ಲೆ ಬೈಲಹೊಂಗಲ ಕೃಷಿ ಮಾರುಕಟ್ಟೆಯಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಸಧ್ಯ ಜಾಗವಿಲ್ಲ. ಅಲ್ಲಿ ಹಮಾಲರು ಮನೆಗಳನ್ನು ಕಟ್ಟುತ್ತೇವೆಂದು ಯಾರೂ ಸಹ ಮುಂದೆ ಬಂದಿಲ್ಲ. ಆದರೂ ಕೂಡ ತೀವ್ರವಾಗಿ ಜಾಗವನ್ನು ತೆಗೆದುಕೊಂಡು ಹಮಾಲರಿಗೆ ಮನೆಗಳನ್ನು ಕಟ್ಟಿಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ.

ಕೆ.ಜಿ.ಎಫ್ ವಿಧಾನ ಸಭಾ ಕ್ಷೇತ್ರದಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ನಿರ್ಮಿಸಿರುವ ಮನೆಗಳು

362 - ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯ ವತಿಯಿಂದ ಕೆ.ಜಿ.ಎಫ್. ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಐದು ವರ್ಷಗಳಲ್ಲಿ ನಿರ್ಮಿಸಿರುವ ಮನೆಗಳೆಷ್ಟು ? ವರ್ಷವಾರು ಎಷ್ಟು ಖರ್ಚು ಮಾಡಲಾಗಿದೆ ?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ಕೆ.ಜಿ.ಎಫ್. ಕ್ಷೇತ್ರದ ವ್ಯಾಪ್ತಿಯಲ್ಲಿ 1993-94 ರಿಂದ 1996-97ರವರೆಗೆ ಮನೆಗಳನ್ನು ನಿರ್ಮಿಸಿರುವುದಿಲ್ಲ. 97-98ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯ ಕ್ರೋಢೀಕೃತ ಹಣದಿಂದ ಅಂಬೇಡ್ಕರ್ ನಗರ ಘೋಷಿತ ಕೊಳಚೆ ಪ್ರದೇಶದಲ್ಲಿ 50 ಮನೆಗಳನ್ನು ನಿರ್ಮಿಸುವ ಕಾಮಗಾರಿಯನ್ನು ಕೈಗೊಂಡಿದ್ದು, ಎಲ್ಲಾ ಮನೆಗಳು ಛಾವಣಿಯ ಮಟ್ಟಕ್ಕೆ ಬಂದಿರುತ್ತವೆ. ಈ ಪೈಕಿ 16 ಮನೆಗಳ ಛಾವಣಿಯ ಕೆಲಸವು ಪೂರ್ಣಗೊಂಡಿರುತ್ತವೆ. ಈವರೆವಿಗೆ ಮೇಲ್ಕಂಡ ಕಾಮಗಾರಿಗೆ 3.00 ಲಕ್ಷ ರೂ.ಗಳು ಖರ್ಚಾಗಿರುತ್ತವೆ.